# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ, ವಾರ್ಡ್‌-95, ಸುಭಾಷ್‌ನಗರ
ನೀಲಿಗಿರಿ ಪಾಪಣ್ಣ ಬ್ಲಾಕ್, ಶ್ರೀರಾಮಪುರ, ಬೆಂಗಳೂರು-560021

---

ಸಂಖ್ಯೆ:ಸ.ಅ/ವಾ-95/ಪಿಆರ್/ /2021-22 ದಿನಾಂಕ:-19-07-2021

## ಸಭಾ ಸೂಚನಾ ಪತ್ರ

ವಿಷಯ:- ವಾರ್ಡ್-95 ಸುಭಾಷ್‌ನಗರ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.

===***===

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶದಂತೆ ವಾರ್ಡ್-95 ಸುಭಾಷ್‌ನಗರ ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ದಿ:23.07.2021 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ಕಛೇರಿ ಮೈಸೂರು ಡಿವಿಯೇಷನ್ ರಸ್ತೆ, ಕಸ್ತೂರಿನಗರ, ಅಂಗಳಪರಮೇಶ್ವರಿ ದೇವಸ್ಥಾನ ಹತ್ತಿರ ಪ್ರೇಸ್ಟಿಜ್ ಅಪಾರ್ಟ್‌ಮೆಂಟ್ಸ್ ಎದುರು, ಬೆಂಗಳೂರು-23. ಇಲ್ಲಿ ಏರ್ಪಡಿಸಲಾಗಿದ್ದು, ತಾವುಗಳು ಸಾರ್ವಜನಿಕ ಕುಂದು ಕೊರತೆಗಳನ್ನು ಚರ್ಚಿಸಲು ಈ ಸಭೆಗೆ ತಪ್ಪದೇ ಹಾಜರಾಗಲು ಕೋರಲಾಗಿದೆ.

ಸಭೆಯಲ್ಲಿ ಚರ್ಚಿಸುವ ವಿಷಯಗಳು

1. ಕೋವಿಡ್-19ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ.
2. ವಾರ್ಡ್ ವ್ಯಾಪ್ಯಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.
3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.
4. ವಾರ್ಡ್-95 ವ್ಯಾಪ್ತಿಯಲ್ಲಿನ ಬೀದಿ ದೀಪಗಳು ಸಂಬಂಧಿಸಿದ ವಿಷಯದ ಬಗ್ಗೆ.
5. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.
6. ಪಾಲಿಕೆ ವತಿಯಿಂದ ಬೀದಿ ಬೀದಿ ವ್ಯಾಪಾರಿಗಳಿಗೆ ಸಾಲ ಭಾಗ್ಯ ಲಭ್ಯವಿದ್ದು ಜನರಿಗೆ ಅರಿವು ಮೂಡಿಸಿ ಅವರನ್ನು ಸಾಲ ಸೌಲಭ್ಯ ಯೋಜನೆಗೆ ನೊಂದಾಯಿಸಿಕೊಳ್ಳಲು ಸಂಬಂಧಿಸಿದ ವಿಷಯದ ಬಗ್ಗೆ.
7. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.
8. ವಿದ್ಯುತ್ ಸರಬರಾಜು (ಬೆಸ್ಕಾಂಗೆ) ಸಂಬಂಧಿಸಿದ ವಿಷಯದ ಬಗ್ಗೆ.
9. ಅಧ್ಯಕ್ಷರ ಸೂಚನೆಯಂತೆ ಇನ್ನಿತರೆ ವಿಷಯಗಳು.

ವಾರ್ಡ್ ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-95

ಪ್ರತಿಯನ್ನು

1. ಜಂಟಿ ಆಯುಕ್ತರು, ಪಶ್ಚಿಮ ವಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು ಗಾಂಧಿನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
6. ಕಛೇರಿಯ ಕಡತಕ್ಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ವಾರ್ಡ್ ಸಂಖ್ಯೆ ಮತ್ತು ಹೆಸರು: ವಾರ್ಡ್–95, ಸುಭಾಷ್‌ನಗರ

ದಿನಾಂಕ:–23.07.2021 ರಂದು ವಾರ್ಡಿನ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ನಡೆದ ಸಭೆಯ ನಡುವಳಿಗಳು

**ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಸುರೇಶ್, ನೋಡೆಲ್ ಅಧಿಕಾರಿ ವಾರ್ಡ್–95
2. ಶ್ರೀ.ವಿ.ಮೋಹನ್, ಸಹಾಯಕ ಅಭಿಯಂತರರು ವಾರ್ಡ್–95
3. ಶ್ರೀ.ರಂಗಸ್ವಾಮಿ, ಬಿ.ಎಬ್ಲ್ಯೂ.ಎಸ್.ಎಸ್.ಬಿ, ಮೀಟರ್ ರೀಡರ್ ವಾರ್ಡ್–95
4. ಶ್ರೀ.ರಮೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–95
5. ಶ್ರೀ.ಪ್ರದೀಪ್, ವೈಧ್ಯಾಧಿಕಾರಿ, ವಾರ್ಡ್–95

ದಿ:23.07.2021 ರಿಂದ ಬೆಳಿಗೆ 10.00 ಗಂಟೆಗೆ ವಾರ್ಡ್–95 ಸುಭಾಷ್‌ನಗರ ವಾರ್ಡ್ ಕಛೇರಿ ಕಸ್ತೂರಿನಗರ ಸಂಭಾಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಡಲ್ ಅಧಿಕಾರಿ ವಾರ್ಡ್–95 ಕಛೇರಿಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ವಾರ್ಡಿನ ಸಭೆಗೆ ಸ್ವಾಗತಿಸಿದರು.

<u>ವಿಷಯ:</u>– ವಾರ್ಡ್–95 ಸುಭಾಷ್‌ನಗರಕ್ಕೆ ಸಂಬಂಧಿಸಿದ ಅಂಗನವಾಡಿಯ ದುರಸ್ಥಿಯನ್ನು, ರಸ್ತೆ ಬದಿಯ ಕಲ್ಲು ಮಣ್ಣು ತೆಗೆಯುವ ಬಗ್ಗೆ ಹಾಗೂ ಸಾರ್ವಜನಿಕರು ಕುಡಿಯುವ ನೀರಿನ ಮತ್ತು ಬೀದಿ ದೀಪದ ದುರಸ್ಥಿಯ ಬಗ್ಗೆ ಕೋವಿಡ್–19 ತಡೆಗಟ್ಟುವ ಬಗ್ಗೆ ರಸ್ತೆ ಬದಿಯ ಮರಗಳು ಸಾರ್ವಜನಿಕರಿಗೆ ತೊಂದರೆ ಇದ್ದಲ್ಲಿ ತೆಗೆಯುವ ಬಗ್ಗೆ, ವಾರ್ಡ್‌ಗೆ ಸಂಬಂಧಿಸಿದಂತೆ ಅಂಗನವಾಡಿಯ ವಿವರ

➢ <u>ಕಾಮಗಾರಿ ಇಲಾಖೆಗೆ ಸಂಬಂಧಿಸಿರುವುದು</u>

1. ಹಿಂದಿನ ಸಭೆಯ ನಡುವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಗಿತ್ತು
2. ಸುಭಾಷ್‌ನಗರ ವಾರ್ಡ್–95ರ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳನ್ನು ಸಣ್ಣಪುಟ್ಟ ದುರಸ್ಥಿ ಕಾರ್ಯವನ್ನು ನಿರ್ವಹಿಸಲು ವಾರ್ಡ್–95ರ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತ್ತು.

➢ <u>ಆರೋಗ್ಯ ಇಲಾಖೆಗೆ ಸಂಬಂಧಿಸಿರುವುದು</u>

1. ವಾರ್ಡ್–95ರ ಸುಭಾಷ್‌ನಗರ ವ್ಯಾಪ್ತಿಯಲ್ಲಿನ ಸಾರ್ವಜನಿಕರ ಶೌಚಾಲಯಗಳನ್ನು ಪ್ರತಿ ದಿನ ಸ್ವಚ್ಚಗೊಳಿಸಿ ದುರಸ್ಥಿಯನ್ನು ಸರಿಪಡಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಬಗ್ಗೆ ಸಂಬಂಧಪಟ್ಟ ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಗುತ್ತಿಗೆದಾರರಿಗೆ ಸೂಚಿಸಲಾಯಿತು.
2. ವಾರ್ಡ್–95ರ ವ್ಯಾಪ್ತಿಯಲ್ಲಿನ ತಾಜ್ಯ ಸಂಗ್ರಹಣೆಗೆ ಹಾಗೂ ನಿರ್ವಹಣೆಗೆ ಬಳಕೆಯಲ್ಲಿರುವ ವಾಹನಗಳ ದಿನನಿತ್ಯದ ದಿನಚರಿಯನ್ನು ನೋಡೆಲ್ ಅಧಿಕಾರಿಗಳು ಪರಿಶೀಲಿಸಿದರು.
3. ವಾರ್ಡ್–95ರ ಪೌರಕಾರ್ಮಿಕರಿಗೆ ಕೆಲಸ ನಿರ್ವಹಿಸಲು ದಿನನಿತ್ಯವಾದ ಸರಕರಣೆಗಳು ಹಾಗೂ ಅವರ ಆರೋಗ್ಯ ಕಾಪಾಡಿಕೊಳ್ಳಲು ಬೇಕಾಗಿರುವ ಮಾಸ್ಕ್, ಹ್ಯಾಂಡ್ ಗ್ಲೌಸ್ ಒದಗಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸಲಾಯಿತು.

➢ <u>ಪ್ರಾಥಮಿಕ ಆರೋಗ್ಯ ಕೇಂದ್ರ</u>

1. ವಾರ್ಡ್–95 ಸುಭಾಷ್‌ನಗರ ವ್ಯಾಪ್ತಿಯಲ್ಲಿನ ಆಶಾ ಕಾರ್ಯಕರ್ತರ ಸಿಬ್ಬಂದಿ ಹಾಗೂ ದಿನನಿತ್ಯದ ಕಾರ್ಯಕ್ರಮಗಳ ವಿವರದ ಬಗ್ಗೆ ಹಾಜರಿದ್ದ ವೈಧ್ಯಾಧಿಕಾರಿಗಳು ನೀಡಿದರು.
2. ವಾರ್ಡ್–95 ಸುಭಾಷ್‌ನಗರ ಬೆಂಗಳೂರು ರಾಜ್ಯ ಯೋಜನಾ ವ್ಯಾಪ್ತಿಯಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಫಲಾನುಭವಿಗಳಿಗೆ ಪ್ರತಿ ಮಾಹಿಗಳಿಗೆ ನೀಡಬೇಕಾದ ಒಂದು ತಿಂಗಳ ಅಹಾರ ಪದಾರ್ಥಗಳ ಪ್ರಮಾಣದ ವಿವರವನ್ನು ಹಾಜರಿದ್ದು ವೈಧ್ಯಾಧಿಕಾರಿಗಳು ನೀಡಿದರು.

➢ <u>ಎನ್.ಜಿ.ಓ</u>

1. ಪಾಲಿಕೆ ವತಿಯಿಂದ ಬೀದಿ ಬೀದಿ ವ್ಯಾಪಾರಿಗಳಿಗೆ ಸಾಲ ಭಾಗ್ಯ ಲಭ್ಯವಿದ್ದು ಜನರಿಗೆ ಅರಿವು ಮೂಡಿಸಿ ಅವರನ್ನು ಸಾಲ ಸೌಲಭ್ಯ ಯೋಜನೆಗೆ ನೊಂದಾಯಿಸಿಕೊಳ್ಳಲು ನೆರವಾಗಲು ಎನ್.ಜಿ.ಓ ಗಳಿಗೆ ಸೂಚಿಸಲಾಯಿತ್ತು.

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸುತ್ತಾ, ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸಿವಿಲ್ ಇಂಜಿನೀಯರ್ಸ್ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿ
ವಾರ್ಡ್–95

ನೋಡೆಲ್ ಅಧಿಕಾರಿ